ಆ) ಬೆಂಗಳೂರಿನ ವಾಹನ ಸಂಚಾರವನ್ನು ಸುಗಮಗೊಳಿಸಲು ಬೆಂಗಳೂರು ನಗರ ಟ್ರಾನ್ಸ್‌ಪೋರ್ಟ್‌ನ್ನು ಸೃಜನಮಾಡಲಾಗಿದೆ. ಹಾಗೂ ಅಲ್ಪಾವಧಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಕ್ರಮವಹಿಸ ಲಾಗುತ್ತಿದೆ. ಈ ಯೋಜನೆಗಳ ಪೈಕಿ ಮುಖ್ಯವಾಗಿಸಂಚಾರ ನಿಬಂಧನೆಗಳನ್ನು ರಸ್ತೆ ಅಗಲೀಕರಣ, ಅಡೊಮ್ಯಾಟಿಕ್‌ರಸ್ತೆ ಸಿಗ್ನಲ್ ಲೈಟುಗಳು, ವಾಹನ ನಿಲುಗಡೆ, ನಿಯಂತ್ರ ಇತ್ಯಾದಿಯೋಜನೆಗಳನ್ನು ಹಮ್ಮಿ ಕೊಳ್ಳಲಾಗಿದೆ.

ಇ) ವಾಹನಳಿಂದಾಗುವ ವಾಯುಮಾಲಿನ್ಯದ ಪ್ರಮಾಣವನ್ನು ಕಂಡು ಹಿಡಿಯಲು "Emmission Invencansation" ಅಧ್ಯಯನವನ್ನು ನಡೆಸಲು ಕೇಂದ್ರ ಮಾಲಿನ್ಯ ಮಂಡಳಿಯವರು TERI ಯವರಿಗೆ ವಹಿಸಿರುತ್ತಾರೆ.

ಈ) ವಾಹನಗಳ ವಾಯು ಮಾಲಿನ್ಯ ಪ್ರಮಾಣವನ್ನು ತಪಾಸಗೆಮಾಡಲು ಮಾಲಿನ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲು ಖಾಸಗಿಯವರಿಗೆ ಅನುಮತಿ ನೀಡಲಾಗುತ್ತಿದೆ. ಇಲಾಖೆಯು ಜನಜಾಗೃತಿ ಮೂಲಕ ವಿಶೇಷ ವಾಯು ಮಾಲಿನ್ಯ ನಿಯಂತ್ರಣ ಆಂದೋಲನವನ್ನು ಏರ್ಪಡಿಸಲಾಗುತ್ತಿದೆ. ವಾಹನಗಳಲ್ಲಿ ಪೆಟ್ರೋಲ್ ಬದಲು ಪರ್ಯಾಯ ಇಂಧನವನ್ನಾಗಿ ಎಲ್.ಪಿ.ಜಿ.ಯನ್ನು ಬಳಸಲು ಮತ್ತು ಬ್ಯಾಟರಿ ಚಾಲಿತ ವಾಹನಗಳ ಬಳಕೆಯನ್ನು ಸರ್ಕಾರವು ಉತ್ತೇಜಿಸುತ್ತಿದೆ. ಬ್ಯಾಟರಿ ಮೇಲಿನ ದ್ವಿಚಕ್ರವಾಹನಗಳನ್ನು ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಗಿದ್ದು, ಈ ವಾಹನಗಳಿಗೆ 5 ವರ್ಷಗಳವರೆಗೆ ರಸ್ತೆ ತೆರಿಗೆ ವಿನಾಯಿತಿ ನೀಡಲಾಗಿದೆ. ಬೆಂಗಳೂರು ನಗರದಲ್ಲಿ ವಿಶೇಷ ತಪಾಸಗೆ ನಡೆಸಿ ವಾಹನಗಳನ್ನು ತಪಾಸಿಸಿ, ಪ್ರಕರಣಗಳನ್ನು ದಾಖಲಿಸಿ ದಂಡವನ್ನು ವಸೂಲಿ ಮಾಡಲಾಗುತ್ತದೆ. ದಿನಾಂಕ: 01.04.1991 ರ ನಂತರ ನೋಂದಣಿಯಾದ ಆಟೋರಿಕ್ಷಾಗಳಿಗೆ ಕಡ್ಡಾಯವಾಗಿ ಎಲ್.ಪಿ.ಜಿ.ಕಿಟ್ ಅಳವಡಿಸುವ ಯೋಜನೆ ಇದ್ದು ದ್ವಿ ಇಂಧನ ಎಲ್.ಪಿ.ಜಿ. ಹೊಂದಿರುವ ಆಟೋರಿಕ್ಷಾಗಳಿಗೆ ಮಾತ್ರಾ ಹೊಸ ರಹದಾರಿಯನ್ನು ನೀಡಲಾಗುತ್ತಿದೆ.

3567 (3889) – ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) –ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪುವಿನಲ್ಲಿ ಬಯಲು ಸೀಮೆಯ ಜನರು ಕೆಲಸಕ್ಕೆ ಬಂದು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇವರುಗಳು ತಮ್ಮ ಸ್ವಂತ ಊರುಗಳಿಗೆ ಹೋಗಲು ಸರ್ಕಾರಿ ಬಸ್ಸನ್ನೇ ಅವಲಂಬಿಸಿರುವುದು ನಿಜವಲ್ಲವೆ ;

ಇ) ಇವರುಗಳು ಊರಿಗೆ ಹೋಗುವಾಗ ಮತ್ತು ಬರುವಾಗ ಕಾಪುವಿನಲ್ಲಿ ಸರ್ಕಾರಿ ಬಸ್ಸುಗಳ ನಿಲುಗಡೆ ಇಲ್ಲದೇ ಇವರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಈ ತೊಂದರೆ ನಿವಾರಿಸಲು ಕಾಪು ಮೂಲಕ ಹಾದು ಹೋಗುವ ಎಲ್ಲಾ ಸರ್ಕಾರಿ ಬಸ್ಸುಗಳಿಗೆ ಕಾಪುವಿನಲ್ಲಿ ನಿಲುಗಡೆ ನೀಡಲು ಸರ್ಕಾರ ಕ್ರಮ ಜರುಗಿಸುವುದೇ ;

ಉ) ಕಾಪುವಿನಲ್ಲಿ ಸರ್ಕಾರಿ ಬಸ್ ನಿಲ್ದಾಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ; ಹಾಗಿದ್ದಲ್ಲಿ, ಎಷ್ಟು ಸಮಯದಲ್ಲಿ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)–

ಅ) ಈ ಪ್ರದೇಶದಲ್ಲಿ ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಿಂದ ಕೂಲಿ ಕೆಲಸ ಅಳುಗಳಾಗಿ ಇಲ್ಲಿಗೆ ಬಂದು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮಂಗಳೂರು–ಕುಂದಾಪುರ ಮಾರ್ಗ ಕಾಪು, ಉಡುಪಿ ರಾಷ್ಟ್ರೀಕೃತವಾಗದ ವಲಯದಲ್ಲಿದ್ದು, ಇಲ್ಲಿನ ಶೇ.99ರಷ್ಟು ಸಾರಿಗೆಗಳನ್ನು ಖಾಸಗಿ ಸಾರಿಗೆ ಪ್ರವರ್ತಕರು ಒದಗಿಸುತ್ತಿದ್ದಾರೆ. ಸಾರ್ವಜನಿಕ ಪ್ರಯಾಣಿಕರು ಮುಖ್ಯವಾಗಿ ಈ ಸಾರಿಗೆಗಳನ್ನೇ ಅವಲಂಬಿಸಿರುತ್ತಾರೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾಪು ಮೂಲಕ 28ದೂರ ಮಾರ್ಗಗಳಲ್ಲಿ ಆಚರಣೆಯಾಗುತ್ತಿರುವ ಸಾರಿಗೆಗಳಿಗೆ ಹಾಗೂ ಮಂಗಳೂರು ಉಡುಪಿಯ (6 ಮಿನಿಬಸ್ಸುಗಳಿಂದ) ನಡುವೆ ಆಚರಗೆಯಲ್ಲಿರುವ 21 ಟ್ರಿಪ್‌ಗಳಿಗೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕಾಪುವಿನಲ್ಲಿ ನಿಲುಗಡೆಯನ್ನು ಕಲ್ಪಿಸಿದೆ.

ಉ) ಕಾಪು ಪ್ರದೇಶದಲ್ಲಿನ ಸಾರಿಗೆ ಅವಶ್ಯಕತೆಯನ್ನು ಖಾಸಗಿ ಸಾರಿಗೆಗಳ ಪ್ರವರ್ತಕರು ಪೂರೈಸುತ್ತಿರುವುದರಿಂದ, ಕರ್ನಾಟಕ ರಾಜ್ಯ ರಸ್ತೆ

ಸಾರಿಗೆ ನಿಗಮದ ವತಿಯಿಂದ ಬಸ್ಸು ನಿಲ್ದಾಣವನ್ನು ನಿರ್ಮಿಸುವ ಅವಶ್ಯಕತೆಯು ಸಧ್ಯಕ್ಕೆ ಕಂಡು ಬರುವುದಿಲ್ಲ.

3568 (3890) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)– ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ಲಾಟರಿ ಯೋಜನೆಯಲ್ಲಿ ಬಹುಮಾನ ವಿರತಣೆಯಾಗದೇ ಉಳಿದ ಹಣವೆಷ್ಟು ?

ಆ) ಈ ಉಳಿದ ಹಣದಲ್ಲಿ ಯಾವುದಾದರೂ ಉದ್ದೇಶಿತ ಕಾಮಗಾರಿಗಳಿಗೆ ವೆಚ್ಚ ಮಾಡಬಹುದೇ ?

ಇ) ವೆಚ್ಚ ಮಾಡಬಹುದಾದರೆ ಕಾಪುವಿಗೆ ಒಂದು ಬಯಲು ರಂಗಮಂದಿರ ನಿರ್ಮಾಣಕ್ಕೆ ಅನುದಾನ ಮೀಸಲಿರಿಸಬಹುದೇ ?

ಶ್ರೀ ಬಸವರಾಜ್ .ಎಸ್ ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)–

ಅ) ಸಾಂಪ್ರದಾಯಿಕ ಲಾಟರಿಯಲ್ಲಿ 2004–05ನೇ ಸಾಲಿನಲ್ಲಿ ಕ್ಲೈಂ ಮಾಡದೇ ಇದ್ದ ಬಹುಮಾನದ ಮೊತ್ತ ರೂ.1,31,60,000.00.

ಆ) ಬಹುಮಾನ ಪಾವತಿಯು ಕ್ಲೈಂ ಸ್ವೀಕರಿಸಿದ ನಂತರ ಮಾತ್ರ ಆಮೊತ್ತವನ್ನು ಸರ್ಕಾರದಿಂದ ಡ್ರಾ ಮಾಡುತ್ತಿದ್ದು ಕ್ಲೈಂ ಬಾರದ ಸಂದರ್ಭದಲ್ಲಿ ಬಹುಮಾನ ಹಣವನ್ನು ಡ್ರಾ ಮಾಡುವುದಿಲ್ಲವಾದ್ದರಿಂದ ವಿತರಣೆಯಾಗದ ಬಹುಮಾನದ ಉಳಿಕೆ ಹಣ ಹಾಗೂ ಲಾಟರಿಯಿಂದ ಸರ್ಕಾರಕ್ಕೆ ಬರುವ ನಿವ್ವಳ ಆದಾಯದೊಂದಿಗೆ ಸೇರಿಸಿ ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತ್ತದೆ.

ಇ) ಕಂಡಿಕೆ 'ಅ'ನಲ್ಲಿನ ಉತ್ತರದ ಹಿನ್ನೆಲೆಯಲ್ಲಿ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

3569 (3891) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ಶ್ರೀ ಸಿ.ಎನ್. ಗಣೇಶ್ ಸಬ್–ಇನ್ಸ್‌ಪೆಕ್ಟರ್ ಎವರೆಸ್ಟ್ ಪರ್ವತಾರೋಹಣ ಇವರಿಗೆ ಸರ್ಕಾರ ಇಲಾಖಾ ಮುಂಬಡ್ತಿ ನೀಡುವ ಆಲೋಚನೆ ಇದೆಯೇ?